71. Sowdanahalli
72. M. Hoshalli
73. Puradakoppal
74. Hunganahalli
75. Maralakere
76. Hunaganahalli
77. Managanahalli
78. Bevukoppal
79. Basaral

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಅಧ್ಯಕ್ಷರೇ, ಈ ಬಸರಾಳು ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸುಮಾರು 79-80 ಗ್ರಾಮಗಳು ಬರುತ್ತವೆ. ಆದರೆ ಅಲ್ಲಿಯ ಪೋಲೀಸ್ ಠಾಣೆಯಲ್ಲಿರ ತಕ್ಕಂಥ ಸಿಬ್ಬಂದಿಯು ಕೇವಲ 6 ಜನರು ಮಾತ್ರ. ಮಂಜೂರಾಗಿರತಕ್ಕಂಥ ಸಿಬ್ಬಂದಿಯ ಸಂಖ್ಯೆ 21 ಆಗಿದೆ. ಈ ಕೊರತೆಯಿರುವ ಸಿಬ್ಬಂದಿಯನ್ನು ತುಂಬಲು ಸರ್ಕಾರದವರು ಏನು ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಯಾವಾಗ ಅದನ್ನು ತುಂಬುತ್ತಾರೆ ಎಂಬ ಪ್ರಶ್ನೆಯನ್ನು ಕೇಳುತ್ತಾ ಅಲ್ಲಿ ಅಕ್ರಮವಾಗಿ ಮನೆ ಕಟ್ಟಲು ಪ್ರಾರಂಭ ಮಾಡಿರುವುದರಿಂದ ಅದಕ್ಕೆ ತಡೆಯಾಜ್ಞೆಯನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು. ಅಲ್ಲಿ ಸದರಿಯವರು ಮನೆಯನ್ನು ಕೂಡ ಕಟ್ಟಿ ಅದನ್ನು ಬೇರೆಯವರಿಗೆ ಬಾಡಿಗೆಗೆ ಕೂಡ ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ತನಿಖೆ ನಡೆಸುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ರಮಾನಾಥ ರೈ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಈಗಾಗಲೇ ನಾವು ಉತ್ತರವನ್ನು ದೊರಕಿಸಿದ್ದೇವೆ. ಅಲ್ಲಿನ ಠಾಣೆಗೆ ಕೆಲವು ಪೋಲೀಸ್ ಕಾನ್ಸ್‌ಟೇಬಲ್‌ಗಳನ್ನು ಹೆಚ್ಚಿಸುತ್ತೇವೆ. ಹಾಗೆಯೇ ಮಾನ್ಯ ಸದಸ್ಯರು ತಡೆಯಾಜ್ಞೆ ಉಲ್ಲಂಘನೆಯ ಬಗ್ಗೆ ಏನು ತಿಳಿಸಿದ್ದಾರೆ. ಶೀಘ್ರವಾಗಿ ಆ ಬಗ್ಗೆ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದಲ್ಲಿ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಎಸ್.ಆತ್ಮಾನಂದ:- ಮಾನ್ಯ ಅಧ್ಯಕ್ಷರೇ, ಈ ಠಾಣೆಗೆ ಮಂಜೂರಾದ ಹುದ್ದೆಯೇ 21 ಇರುವಾಗ ಈಗ ಇರುವುದು ಆರು ಜನರು ಮಾತ್ರ. ಬಾಕಿ ಕೊರತೆ ಇರುವ 15 ಜನರನ್ನು ಯಾವಾಗ ಇವರು ತುಂಬಿಕೊಡುತ್ತಾರೆ ? ಹಾಗೆಯೇ ಅಲ್ಲಿ ಒಂದು ಸ್ಥಳದಲ್ಲಿ ತಡೆಯಾಜ್ಞೆ ಇದ್ದರೂ ಕೂಡ ಮನೆ ಕಟ್ಟಿಬಿಟ್ಟಿದ್ದಾರೆ, ಅದಕ್ಕೆ ಕಾರಣವೇನೆಂದರೆ ಅಲ್ಲಿ ಪೋಲೀಸ್ ಸಿಬ್ಬಂದಿಯು ಕಡಿಮೆ ಇರುವುದು ಎಂದು ನನ್ನ ಅನಿಸಿಕೆ. ಹೀಗೆ ಅಕ್ರಮವಾಗಿ ಮನೆ ಕಟ್ಟಿರುವ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮಾನಾಥ ರೈ:- ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ಪೋಲೀಸ್ ಸಿಬ್ಬಂದಿ ನೇಮಕಾತಿ ಕುರಿತು ಪ್ರಕ್ರಿಯೆಗಳು ಪ್ರಾರಂಭವಾಗಿದೆ. ಆದಷ್ಟು ಶೀಘ್ರವಾಗಿ ಆ ನೇಮಕಾತಿಗಳನ್ನು ಮಾಡುತ್ತೇವೆ. ಇನ್ನು ತಡೆಯಾಜ್ಞೆಯ ಬಗ್ಗೆ ಏನು ಜಿಜ್ಞಾಸೆಯನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ ಅದನ್ನು ನಾವು ವಿಚಾರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಲಂಬಾಣಿ ತಾಂಡಾಗಳಲ್ಲಿರುವ ಸಾರಾಯಿ ಅಂಗಡಿಗಳು

398 (2007): ಶ್ರೀ ಬಾಬುರಾವ್ ಚವ್ಹಾಣ (ಜಹಾಬಾದ್):-

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯದಲ್ಲಿ ಎಷ್ಟು ಲಂಬಾಣಿ ತಾಂಡಗಳು ಇವೆ ಮತ್ತು ಎಷ್ಟು ಲಂಬಾಣಿ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ಇವೆ ?

ಆ. ಈಗಲಾದರೂ ಲಂಬಾಣಿ ತಾಂಡಾದಿಂದ ಸಾರಾಯಿ ಅಂಗಡಿ ತೆಗೆದು ಹಾಕಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ. 1365 ಲಂಬಾಣಿ ತಾಂಡಾಗಳು. ಒಟ್ಟು 76 ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ಇವೆ.

ಆ. ಈ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಬಾಬುರಾವ್ ಚಿವ್ವಾಣ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಲ್ಲಿ ರಾಜ್ಯದಲ್ಲಿನ ಎಷ್ಟು ಲಂಬಾಣಿ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ಇವೆ ಎಂದು ಕೇಳಿದ್ದೇನೆ, ಅದಕ್ಕೆ ಉತ್ತರದಲ್ಲಿ 1365 ಲಂಬಾಣಿ ತಾಂಡಾಗಳು ಇವೆ, ಅದರಲ್ಲಿ 76 ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ಇವೆ ಎನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಮುಖ್ಯ ಮುಂತ್ರಿಯವರಲ್ಲಿ ನಾನು ಕೇಳಬಯಸುವುದೇನೆಂದರೆ ಪರಿಶಿಷ್ಟ ಜಾತಿ ಮತ್ತು ಜನಾಂಗದವರು ಇರುವ ಯಾವುದೇ ಓಣಿ ಇರಲಿ, ಅಲ್ಲಿ ಸಾರಾಯಿ ಅಂಗಡಿಗಳು ಇರಬಾರದು ಎಂದು ಕಟ್ಟುನಿಟ್ಟಿನ ನಿಯಮಗಳು ಇವೆ. ಆದರೂ ಕೂಡ 76 ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ಇವೆ ಎಂಬ ಉತ್ತರ ಬಂದಿದೆ. ಇದು ಹೀಗೆ ಆಗಬಾರದು. ಹಾಗೆಯೇ ನಾನು ಇರತಕ್ಕಂಥ ಲಂಬಾಣಿ ತಾಂಡವು ಮಲಖೇಡ್ ರೋಡ್ ಸ್ಟೇಷನ್‌ದಲ್ಲಿದೆ, ಅಲ್ಲಿ ನನ್ನ ಮನೆಯ ಎದುರುಗಡೆಯೇ ಸಾರಾಯಿ ಅಂಗಡಿಯು ಇದೆ. ಈ ಬಗ್ಗೆ ಮಾನ್ಯ ಧರ್ಮಸಿಂಗ್‌ರವರು ಇರುವಾಗ ಪ್ರಶ್ನೆಯನ್ನು ಹಾಕಿದ್ದೆ, ಅವರು ಆ ಅಂಗಡಿಯನ್ನು ತೆಗೆಸುತ್ತೇನೆ ಎಂದು ಹೇಳಿದ್ದರಾದರೂ ಇನ್ನೂ ಆ ಅಂಗಡಿಯನ್ನು ತೆಗೆಯಿಸಿಲ್ಲ. ಇದನ್ನು ಯಾವಾಗ ತೆಗೆಸುತ್ತೀರಿ ? ಪರಿಶಿಷ್ಟ ಜಾತಿ ಮತ್ತು ಜನಾಂಗದವರು ಇರತಕ್ಕಂಥ ಸ್ಥಳಗಳಲ್ಲಿ ಸಾರಾಯಿ ಅಂಗಡಿ ಇರಬಾರದು ಎಂದು ಕಾನೂನು ಇದ್ದರೂ ಕೂಡ ಏಕೆ ತೆಗೆಯುತ್ತಿಲ್ಲ. ಈಗ ಇದ್ದಂಥ ಅಂಗಡಿಗಳೆಲ್ಲವನ್ನೂ ಎಷ್ಟು ದಿವಸಗಳಲ್ಲಿ ತೆಗೆಸುತ್ತೀರಿ ಎನ್ನುವ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಯವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:–ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾವು ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಈ ಪ್ರಮುಖವಾದಂಥ ಮೂರು ಸ್ಥಳಗಳಲ್ಲಿ ಅಂದರೆ ಶಿಕ್ಷಣ ಸಂಸ್ಥೆಗಳಿಗೆ ಹತ್ತಿರ ಇರುವಂಥಾದ್ದು, ಧರ್ಮ ಕ್ಷೇತ್ರಗಳಿಗೆ ಹತ್ತಿರ ಇರತಕ್ಕಂಥಾದ್ದು, ಪರಿಶಿಷ್ಟ ಜಾತಿ ಮತ್ತು ಜನಾಂಗಗಳ ತಾಂಡಾಗಳು, ಕಾಲೋನಿಗಳ ಹತ್ತಿರ ಇರತಕ್ಕಂಥ ಎಲ್ಲಾ ಸ್ಥಳಗಳಲ್ಲಿಯೂ ಕೂಡ ಆರಾಕ್ ಷಾಪ್ ಇರಬಾರದು ಎಂದು ನಾವು ನಿರ್ಣಯವನ್ನು ತೆಗೆದುಕೊಂಡ ಕಾರಣ, ಈ ಆಕ್ಷನ್ ಆಥವಾ ಟೆಂಡರ್ ಕರೆಯಲು ಯಾವ ಶೆಡ್ಯೂಲ್‌ಗಳಿವೆ ಅದನ್ನು, ಇವುಗಳನ್ನು ತೆಗೆದು ಪಬ್ಲಿಷ್ ಮಾಡಿ ಎಂದು ಈಗಾಗಲೇ ನಿರ್ಣಯವನ್ನು ಕೂಡ ತೆಗೆದುಕೊಂಡಿದ್ದೇವೆ. ಈ 76 ಸ್ಥಳಗಳಲ್ಲಿರತಕ್ಕಂಥ ಅಂಗಡಿಗಳನ್ನು ಕೂಡ ಡಿಲೀಟ್ ಮಾಡುತ್ತೇವೆ. ಮೇಲೆ ಹೇಳಿದ ಸ್ಥಳಗಳಲ್ಲಿ ಆರಾಕ್‌ಷಾಪ್‌ಗಳು ಇಲ್ಲದ ಹಾಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇನ್ನುಳಿದಂಥ ಸ್ಥಳಗಳಲ್ಲಿ ಎಲ್ಲಿಯಾದರೂ ಅಂದರೆ ಶಿಕ್ಷಣ ಸಂಸ್ಥೆಗಳು, ಧರ್ಮ ಸಂಸ್ಥೆಗಳು, ಹರಿಜನ ಗಿರಿಜನ ಕಾಲೋನಿಗಳು, ಲಂಬಾಣಿ ತಾಂಡಾಗಳು ಹೀಗೆ ಎಲ್ಲಿಯಾದರೂ ಆರಾಕ್‌ಷಾಪ್‌ಗಳು ಇದ್ದರೆ ಅದನ್ನು ಕಿತ್ತು ಹಾಕಲಿಕ್ಕೆ ಕಟ್ಟುನಿಟ್ಟಾಗಿ 1993-94 ರಿಂದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. 1993–94 ರಿಂದ ಯಾವುದೇ ದಯದಾಕ್ಷಿಣ್ಯವಿಲ್ಲದೆ ಎಲ್ಲವನ್ನೂ ತೆಗೆದು ಹಾಕುತ್ತೇವೆ. ಅದೇ ರೀತಿಯಲ್ಲಿ ಐ.ಎಂ.ಎಲ್. ಶಾಪ್ಸ್ ಕೂಡ ಈ ಪ್ರದೇಶಗಳಲ್ಲಿ

ಇದ್ದರೆ, ಆ ಅಂಗಡಿಗಳನ್ನು ಕೂಡ ಬೇರೆ ಕಡೆಗೆ ಶಿಫ್ಟ್ ಮಾಡಿ ಎಂದು ಹೇಳುತ್ತಾ ಇದ್ದೇವೆ. ಅವರು ಶಿಫ್ಟ್ ಮಾಡದಿದ್ದರೆ ಆ ಲೈಸನ್ಸ್‌ಗಳನ್ನು ಕೂಡ ರದ್ದು ಮಾಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ:– ಅದಕ್ಕೆ ಅನುಕೂಲವಾಗುವಂಥ ಒಂದು ಅಳತೆಯನ್ನು ತಾವುಗಳು ಸೂಚಿಸುವುದು ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, 100 ಮೀಟರ್ ಪರಿದಿಯಲ್ಲಿರುವಂಥ ಎಲ್ಲಾ ಶಾಪ್‌ಗಳನ್ನು ಕೂಡ, ಆ ಒಂದು ಶೆಡ್ಯೂಲ್‌ಗಳನ್ನು ಕಿತ್ತು ಹಾಕುತ್ತೇವೆ. ಅವರಿಗೆ ನಿಗದಿತ ದೂರಕ್ಕೆ ಸ್ಥಳಾಂತರ ಮಾಡಲು ಹೇಳುತ್ತೇವೆ, ಅವರು ಒಪ್ಪದಿದ್ದರೆ ಲೈಸನ್ಸ್‌ನ್ನು ರದ್ದು ಮಾಡುತ್ತೇವೆ.

ಶ್ರೀ ಬಾಬುರಾವ್ ಚವ್ಹಾಣ್:– ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ ವಿಚಾರಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿ, ಪರಿಶಿಷ್ಟ ಜಾತಿ ಜನಾಂಗದವರು ಇರುವ ಓಣಿಯಲ್ಲಿಯೇ ಬೇರೆ ಊರಿನ ಲೈಸನ್ಸ್ ಹೊಂದಿರತಕ್ಕಂಥ ಜನಗಳು ಅನಧಿಕೃತವಾಗಿ ತಂದು ಮಾರುತ್ತಾರೆ. ಲಂಬಾಣಿ ತಾಂಡಗಳಲ್ಲಿ ಕೂಡ ತಂದು ಮಾರುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸಭಾಧ್ಯಕ್ಷರೇ, ಹಾಗೆ ಅನಧಿಕೃತವಾಗಿ ಮಾರಲಿಕ್ಕೆ ಆಗುವುದಿಲ್ಲ. ಹಾಗೆ ಮಾಡಿದರೆ ಆ ಏರಿಯಾಗೆ ಸಂಬಂಧಪಟ್ಟ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಹೆಚ್. ಯಂಕಾ ನಾಯಕ್:– ನನ್ನ ಕ್ಷೇತ್ರದಲ್ಲಿ ಸುಮಾರು 65 ತಾಂಡಗಳು ಇವೆ. ಆ ಭಾಗದಲ್ಲಿ 1-2 ಲೈಸನ್ಸ್ ಇದ್ದರೆ ಅವರುಗಳು ಒಂದೊಂದು ತಾಂಡಾದಲ್ಲಿ 3–4 ಅಂಗಡಿಗಳನ್ನು ಇಟ್ಟಿದ್ದಾರೆ. ಅಲ್ಲಿಯ ಜನರು ಕುಡಿದು ಹಾಳಾಗುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿ ಕೊಳ್ಳುವುದೇನೆಂದರೆ, ಹಾಗೆ ಲೈಸನ್ಸ್ ಇಲ್ಲದ ತಾಂಡಗಳಲ್ಲಿ ಅಂಗಡಿಗಳನ್ನು ಇಡಲು ಅವಕಾಶವನ್ನು ಕೊಡಬಾರದು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರು ಹೇಳಿದ ಉದ್ದೇಶದಿಂದಲೇ ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಯಾವುದೇ ಅಂಗಡಿಗಳು ಹೀಗೆ ಅಧಿಕೃತವಾಗಿರಲಿ, ಅನಧಿಕೃತವಾಗಿರಲಿ ಅಲ್ಲಿ ಇರುವುದಕ್ಕೆ ಸಾಧ್ಯವಿಲ್ಲ.

ಕರ್ನಾಟಕ ಕೆ.ಪಿ.ಎಸ್.ಸಿ. ನೇರ ನೇಮಕಾತಿಯಲ್ಲಿ ವಿಳಂಬ ಹಾಗೂ ತಾರತಮ್ಯ

399 (727): ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ):–

ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕದಲ್ಲಿ ಕೆ.ಪಿ.ಎಸ್.ಸಿ. ಯಿಂದ ನೇರವಾದ ಸಂದರ್ಶನ ನಡೆಸಿ ನೇಮಕಾತಿ ಮಾಡುವಲ್ಲಿ ಆಗುತ್ತಿರುವ ವಿಳಂಬ ನೀತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಆಯ್ಕೆ ಮಾಡುವಾಗ ತಾರತಮ್ಯ ನೀತಿ ಅನುಸರಿಸುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಈ ತಾರತಮ್ಯ ನೀತಿಯನ್ನು ಹೋಗಲಾಡಿಸುವ ದೃಷ್ಟಿಯಿಂದ ವಿಭಾಗ ಮಟ್ಟದಲ್ಲಿ ಸಮಿತಿ ರಚಿಸುವ ನಿರ್ಧಾರ ಸರ್ಕಾರಕ್ಕೆ ಇದೆಯೇ;

ಇ. ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು;

ಈ. ಮಹಾರಾಷ್ಟ್ರದಲ್ಲಿ ವಿಭಾಗ ಮಟ್ಟದ ಸಮಿತಿ ಇರುವುದು ಸರ್ಕಾರಕ್ಕೆ ತಿಳಿದಿದೆಯೇ;

ಉ. ತಿಳಿದಿದ್ದಲ್ಲಿ ಅದೇ ರೀತಿ ವಿಭಾಗ ಮಟ್ಟದಲ್ಲಿ ಸಮಿತಿಯನ್ನು ಆರಂಭಿಸಲಾಗುವುದೇ ?